**OS No. 04/2017**
**DW-2**

(ದಿನಾಂಕ 15.03.2024 ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆವಿಧಿ ಬೋಧಿಸಲಾಯಿತು).

**ಪಾಟೀ ಸವಾಲು ವಾದಿ ಪರ ಶ್ರೀ. ಡಿ.ಎನ್ ವಕೀಲರಿಂದಃ**

1. ದಾವಾ ಆಸ್ತಿ ವಾದಿ ಮತ್ತು ಅವರ ಕುಟುಂಬದ ಸದಸ್ಯರಿಗೆ ಸೇರಿದ್ದು ಅಂದರೆ ಸರಿಯಲ್ಲ. ದಾವಾ ಆಸ್ತಿ ಮೊದಲು ಬೆನಕಪ್ಪ ಇವರ ಹೆಸರಿನಲ್ಲಿ ಇರುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ನಾನು ಸರ್ವೆ ನಂ. 407 ರಲ್ಲಿ ಚನ್ನಬಸಯ್ಯ ಇವರಿಂದ ನಿವೇಶನ ಸಂಖ್ಯೆ 139 ಕ್ಷೇತ್ರ 25X50 ಆಸ್ತಿಯನ್ನು ಖರೀದಿ ಮಾಡಿರುತ್ತೇನೆ. ನಾನು ಆ ಬಗ್ಗೆ ಖರೀದಿ ಪತ್ರಗಳನ್ನು ಹಾಜರು ಪಡಿಸಿರುತ್ತೇನೆ. ನಾನು ಆಸ್ತಿ ಖರೀದಿಸುವಾಗ ಸರ್ವೆ ನಂ. 407/2 ಚನ್ನಬಸಪ್ಪ ಇವರ ಹೆಸರಿನಲ್ಲಿ ಇತ್ತು. ಜಮೀನು ಸರ್ವೆ ನಂ. 407/2 ಒಟ್ಟು ಎಷ್ಟು ಕ್ಷೇತ್ರ ಇತ್ತು ನನಗೆ ಗೋತ್ತಿಲ್ಲ. ಸದರಿ ಜಮೀನು ಬೀನ್ ಶೇತಗಿ ಆಗಿರುತ್ತದೆ ಅಂದರೆ ಸರಿ. ಅದು ಯಾವ ವರ್ಷದಲ್ಲಿ ಆಗಿರುತ್ತದೆ ನನಗೆ ಗೋತ್ತಿಲ್ಲ. ಸಾಕ್ಷಿ ಮುಂದುವರೆದು 40 ವರ್ಷಗಳ ಹಿಂದೆ ಆಗಿರುತ್ತದೆ ಎಂದು ಹೇಳುತ್ತಾರೆ. ದಾವಾ ಆಸ್ತಿಯನ್ನು ಬೀನ್ ಶೇತಗಿ ಆದೇಶ ವಾದಿಯ ತಂದೆ ಅಮರಪ್ಪ ಮಾಡಿಸಿರುತ್ತಾರೆ ಅಂದರೆ ಸರಿಯಲ್ಲ. ನಾನು ದಾವಾ ಆಸ್ತಿಯಲ್ಲಿ ಅಕ್ರಮವಾಗಿ ಮನೆ ಕಟ್ಟಿರುತ್ತೇನೆ ಎಂದು ನನ್ನ ವಿರುದ್ದ ವಾದಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿದ್ದ ಅಂದರೆ ಸರಿ. ದಾವಾ ಆಸ್ತಿಯಲ್ಲಿ ಇರುವ ಎಲ್ಲ ನಿವೇಶನೆಗಳು ವಾದಿ ಮತ್ತು ಅವರ ಕುಟುಂಬದ ಸದಸ್ಯರ ಸ್ವಾಧೀನದಲ್ಲಿ ಇವೆ ಅಂದರೆ ಸರಿಯಲ್ಲ. ಸರ್ವೆ ನಂ. 407/2 ರಲ್ಲಿ ಇರುವ ಎಲ್ಲ ಕ್ಷೇತ್ರಗಳಲ್ಲಿ ಮನೆಗಳು ನಿರ್ಮಾಣ ಆಗಿರುತ್ತವೆ ಯಾವುದೇ ಖಾಲಿ ಜಾಗಗಳು ಇರುವುದಿಲ್ಲ. ಆ ಬಗ್ಗೆ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿ ಬರೆಸಿರುತ್ತೇನೆ.

2. ನಾನು ನಿವೇಶನವನ್ನು ಸುಮಾರು 40 ವರ್ಷಗಳ ಹಿಂದೆ ಖರೀದಿಸಿರುತ್ತೇನೆ. ನನಗೆ ಈಗ 53 ವರ್ಷ ವಯಸು ಆಗಿರುತ್ತದೆ. ಮುಖ್ಯ ವಿಚಾರಣೆಯಲ್ಲಿ ನನ್ನ ವಯಸು 45 ಎಂದು ಬರೆದಿರುತ್ತಾರೆ ಅಂದೆರ ಸರಿ. ನಮ್ಮ ಆಸ್ತಿ ಚನ್ನಬಸಪ್ಪ ಇವರಿಂದ ನನ್ನ ಸಹೋದರ ಖರೀದಿಸಿದ್ದ. ನನ್ನ ಸಹೋದರನಿಂದ ನಾನು ಖರೀದಿಸಿರುತ್ತೇನೆ. ನನ್ನ ಸಹೋದರ

**OS No. 04/2017**
**DW-2**

ಖರೀದಿಸಿದ ದಾಖಲೆ ಹಾಜರು ಪಡಿಸಿರುತ್ತೇನೆ. ನನ್ನ ಸಹೋದರ ನಿವೇಶನ ಸಂಖ್ಯೆ 407 ಖರೀದಿಸಿದ. ವಾದಿಯ ತಂದೆ ಸುಮಾರು 30 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ಆದರೆ ಯಾವ ವರ್ಷ ಎಂದು ನಿಖರವಾಗಿ ಗೋತ್ತಿಲ್ಲ. ವಾದಿಯ ತಂದೆ ಮೃತಪಟ್ಟ ನಂತರ, ದಾವಾ ಆಸ್ತಿ ಅಮರಪ್ಪ ಇವರ ಹೆಸರಿನಲ್ಲಿ ವರ್ಗಾವಣೆ ಆಗಿತ್ತು ಅಂದರೆ ಸರಿ. ತಾಯಿಯ ಹೆರಿಸನಲ್ಲಿ ಇದ್ದ ಆಸ್ತಿಯನ್ನು ವಾದಿ ತನ್ನ ಹೆಸರಿನಲ್ಲಿ ವರ್ಗಾವಣೆ ಮಾಡಿಕೊಂಡಿರುತ್ತಾನೆ ಅಂದರೆ ಸರಿ. ನಿಡಿ.4 ರಲ್ಲಿ, ಜಮೀನು ಸರ್ವೆ ನಂಬರ, ಎನ್.ಎ ಆದೇಶ ನಂಬರ ಇಲ್ಲ ಅಂದರೆ ಸರಿಯಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಡಿ.4 ರಲ್ಲಿ ಇರುವ ಆಸ್ತಿ ಮತ್ತು ದಾವಾ ಆಸ್ತಿಗೆ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಾನು ಖರೀದಿ ಪತ್ರ ಹಾಜರು ಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ನಿಡಿ.9 ರ ಪ್ರಕಾರ ಸರ್ವೆ ನಂ. 371/ಅ ಆಸ್ತಿಯಲ್ಲಿ ನಾನು ಮತ್ತು ನನ್ನ ಸಹೋದರ ವಿಭಾಗ ಮಾಡಿಕೊಂಡಿರುತ್ತೇವೆ ಅಂದರೆ ಸರಿಯಲ್ಲ. ನಿಡಿ.4 ಮತ್ತು 9 ದಾಖಲೆಗಳು, ದಾವಾ ಆಸ್ತಿಗೆ ಯಾವುದೇ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಯಾವುದೇ ಆಸ್ತಿ ಖರೀದಿ ಮಾಡಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಅಕ್ರಮ ಪ್ರವೇಶ ಮಾಡಿ ಟೀನ್ ಶೇಡ್ ಹಾಕಿರುತ್ತೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿ ಗ್ರಾಮಕ್ಕೆ ಹೊಂದಿಕೊಂಡು ಇದೆ ಅಂದರೆ ಸರಿ. ದಾವಾ ಆಸ್ತಿಗೆ ಮತ್ತು ನನಗೆ ಯಾವುದೇ ಸಂಬಂಧ ಇರದೇ ಇದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿರುತ್ತದೆ.)

ಓ.ಹೇ.ಕೆ.ಸರಿ ಇದೆ

**ಪ್ರ.ದ.ನ್ಯಾದಂ.ಗಳು, ಮಾನ್ವಿ**